O.S.No.134/2016
P.W.:2

ಈ ದಿನ ದಿಃ17.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ- 1ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಸಿ ರವರಿಂದಃ-</u>**

1. ವಾದಿ ನನಗೆ ಸಂಬಂಧಿಕನಲ್ಲ, ಅವರು ನಮ್ಮ ಊರಿನವರು. ವಾದಿ ನನಗೆ 30ವರ್ಷಗಳಿಂದ ಪರಿಚಯ. ಈ ದಿನ ನ್ಯಾಯಾಲಯಕ್ಕೆ ನಾನು ವಾದಿಯೊಂದಿಗೆ ಬಂದಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದ ಸಂಗತಿಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಈ ದಾವೆಯನ್ನು ಸ್ವಾಮಿ ಎನ್ನುವವರು ತಮ್ಮಯ್ಯ ಎನ್ನುವವರ ವಿರುದ್ದ ಹೂಡಿರುತ್ತಾರೆ. ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.

2. ಈ ದಾವೆಯನ್ನು ಸೈಟ್ ನಂಬರ್ 17ಕ್ಕೆ ಸಂಬಂಧಿಸಿದಂತೆ ಹೂಡಿರುತ್ತಾರೆ. ದಾವಾಸ್ವತ್ತು ಉತ್ತರ-ದಕ್ಷಿಣ 33 ಅಡಿ, ಪೂರ್ವ-ಪಶ್ಚಿಮ 45 ಅಡಿ ಇರುತ್ತದೆ. ದಾವಾಸ್ವತ್ತಿನ ಪೂರ್ವಕ್ಕೆ ವೆಂಕಟಮ್ಮರವರ ಮನೆ, ಪಶ್ಚಿಮಕ್ಕೆ ಬಸವರಾಜು ಮೇಸ್ತ್ರಿ ರವರ ಮನೆ ಇರುತ್ತದೆ, ಉತ್ತರಕ್ಕೆ ಕಾರಯ್ಯ ರವರ ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ ಬರುತ್ತದೆ. ದಾವಾಸ್ವತ್ತು ವಾದಿಗೆ ಹೇಗೆ ಬಂದಿರುತ್ತದೆ ಎನ್ನುವುದು ನಿಮಗೆ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 1972ರಲ್ಲಿ ಬೋರಮ್ಮ ಎನ್ನುವವರಿಗೆ

ಸರ್ಕಾರದಿಂದ ದಾವಾಸ್ವತ್ತು ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ವಾದಿ ಬೋರಮ್ಮ ರವರಿಗೆ ಮೊಮ್ಮಗನಾಗಬೇಕು. ಬೋರಮ್ಮ ರವರು ನಿಮಗೆ ಏನಾಗಬೇಕು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ನಮ್ಮ ಊರಿನವರು ಎಂದು ನುಡಿಯುತ್ತಾರೆ.

3. ದಾವಾಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಬೋರಮ್ಮ ಮತ್ತು ಆಕೆಯ ಮಗನಾದ ದಾಸಪ್ಪ ಎನ್ನುವವರು ದಾವಾಸ್ವತ್ತನ್ನು 1987ರಲ್ಲಿ 1ನೇ ಪ್ರತಿವಾದಿಗೆ ಕ್ರಯಪತ್ರದಡಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1987ರ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. ದಾವಾಸ್ವತ್ತಿನ ಖಾತೆಯು ಈಗ ಯಾರ ಹೆಸರಿನಲ್ಲಿದೆ ಎನ್ನುವುದು ನಿಮಗೆ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬೋರಮ್ಮ ಮತ್ತು ದಾಸಯ್ಯ ರವರ ಹೆಸರಿನಲ್ಲಿ ಇರಬಹುದು ಎಂದು ನುಡಿಯುತ್ತಾರೆ. ಈ ರೀತಿ ದಾವಾಸ್ವತ್ತಿನ ಖಾತೆಯು ಬೋರಮ್ಮ ಮತ್ತು ದಾಸಯ್ಯ ರವರ ಹೆಸರಿಗೆ ಇದ್ದ ದಾಖಲೆಯನ್ನು ನಾನು ನೋಡಿರುವುದಿಲ್ಲ. ಬೋರಮ್ಮ ಮತ್ತು ದಾಸಯ್ಯ ರವರ ಹೆಸರಿಗೆ ದಾವಾಸ್ವತ್ತಿನ ಖಾತೆ ಇರಬಹುದು ಎಂಬ ಸಂಗತಿಯು ನಿಮಗೆ ಯಾರು ತಿಳಿಸಿದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರಿಗೆ ಅದು ಮಂಜೂರಾಗಿರುತ್ತದೆ, ಹಾಗಾಗಿ ಖಾತೆ ಅವರ ಹೆಸರಿನಲ್ಲಿ ಇರಬಹುದು ಎಂದು ನಾನು ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

O.S.No.134/2016
P.W.:2

4. ದಾವಾಸ್ವತ್ತಿನ ಯಾವ ದಿಕ್ಕಿಗೂ ನನಗೆ ಸಂಬಂಧಿಸಿದ ಆಸ್ತಿಗಳು ಇಲ್ಲ ಎಂದರೆ ಸರಿ. ಈ ದಾವೆಯನ್ನು ವಾದಿ ಏನು ಪರಿಹಾರ ಕೋರಿ ಹೂಡಿರುತ್ತಾರೆಂಬ ಸಂಗತಿ ನನಗೆ ಗೊತ್ತಿಲ್ಲ. ನಾನು 1971ರಲ್ಲಿ ಹುಟ್ಟಿರುತ್ತೇನೆ. ದಾವಾಸ್ವತ್ತನ್ನು 1987ರಲ್ಲಿಯೇ 1ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ಮತ್ತು ದಾವಾಸ್ವತ್ತಿನಲ್ಲಿ 1ನೇ ಪ್ರತಿವಾದಿಯೇ ಸ್ವಾಧೀನದಲ್ಲಿರುವ ವಿಚಾರ ನನಗೆ ಗೊತ್ತಿದ್ದರು, ವಾದಿಗೆ ಸಹಾಯ ಮಾಡಬೇಕೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನಲ್ಲಿ ಈಗಲೂ ವಾದಿಯೇ ಸ್ವಾಧೀನದಲ್ಲಿದ್ದಾರೆಂದು ನಾನು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ.

**ಮರುವಿಚಾರಣೆ:- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**